471

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೇ ನಂಬರ್.	ಬಾಬು ತರೀ ಖುಷ್ಕೀ ಬಾಗಾಯಿತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಮಗೈರೆ. ಕೂಡಿದ ಮಟ್ಟಿ ಗೇಕರಾರ್ಯಕ್ರಮ ತಪ್ಪೀಲ್.	ಹರಾಜು ಸ್ವತ್ತಿಗೆ ಬರೀಮು ಸಲ್ಲುವ ಕಾಲ.	ಹರಾಜು ನಡಿಸತಕ್ಕವರ ಹೆಸರು.	ಸ್ವತ್ತಿಗೆ ಸರ್ಕಾರದವರಿಗೆ ಸಲ್ಲತಕ್ಕ ಜಮೀನಿನ ಹೆಸರು.	ಇತರ ಪರಾ.
1	2	3	4	5	6	7	8	9	10	11	
					ಎ. ಗುಂ.	ರೂ. ಆ. ಪೈ.					
ಚಿಕ್ಕಬಳ್ಳಾಪುರ	ಪೆರೇಸಂದ್ರ	ಬೋಯಿನಹಳ್ಳಿ	1	ತರೀ	1—32	7 8 0	..	ಈ ಜಮೀನುಗಳು ಬಿ! 1896ನೇ ಇಸವಿ ಅಕ್ಟೋಬರ್ 26 ಯಿಪ್ಪತ್ತಾರನೇ ತಾರೀಖು ಸೋಮವಾರ ದಿವಸ 11 ಘಂಟೆಗೆ.	ಚಿಕ್ಕಬಳ್ಳಾಪುರದ ಅನುದಾರ್.		
			9	ಖುಷ್ಕೀ	3—19	5 8 0	..				
			11	ತರೀ	3—10	22 0 0	ಜಾಲಿಗಿಡ 1				
			27	ತರೀ	0—18	3 0 0	..				
			108	ತರೀ	1—29	10 0 0	ಜಾಲಿಗಿಡ 2				
				ಖುಷ್ಕೀ	0—23						
			133	ತರೀ	1—17	8 0 0	ಡಿಟೋ 3				
				ಖುಷ್ಕೀ	0— 6						
			134	ತರೀ	0—24	4 8 0	ಡಿಟೋ 1				
				ಖುಷ್ಕೀ	0—39						
			127	ಖುಷ್ಕೀ	1—39	2 12 0	ಜಾಲೀ ಹುಂಗೀ ಮಗೈರೇ 202				
			1								
			127	ಡಿಟೋ	1—22	2 0 0					
			2								
			127	ಡಿಟೋ	2— 6	3 0 0					
			3								
			127	ಡಿಟೋ	1—37	2 12 0					
			4								
			26	ಖರಾಬು	0—15	ಖರಾಬು	..				
			1								
			28	ಡಿಟೋ	1—25	ಖರಾಬು	..				ಈ ಜಮೀನ್‌ಗಳು ಈಗ ಇರುವ ಹಳೇ ಕಾಲ್ವೇ ನೀರಿನಿಂದಲೇ ಸಾಗುವಳಿ ಮಾಡಿಕೊಳ್ಳಬೇಕಾಗಿರುತ್ತೆ.

ಸರ್ವೇ 26—28ನೇ ನಂಬರು ಖರಾಬು ಜಮೀನ್‌ಗಳಿಗೆ ಬಾಜೂ ಆಕಾರ ಕಂಡ ನಂಬರುಗಳ ದರದಂತೆ ದಾಖಲ್ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಜಿಲ್ಲೆಟ ಕಮ್ಮಿಷನರ್.

ನೋಟಿಸ್.

ಮೈಸೂರು ಮುನ್‌ಶೀಫ್ ಕೋರ್ಟಿನಲ್ಲಿ.

1896—97ನೇ ಇಸವಿ ಸಿವಲ್ ಸೂಟ್ ನಂಬರು 64.

ವಾದಿಗಳು—ಹುಣಸೂರು ಟವನಿನಲ್ಲಿರುವವರು,

1. ವೈಲಾಂಡಾಚಾರಿ ಮಗ ಕೂರಸಾಮಿ ಆಚಾರಿ
2. ಚವ್ವೆದ್ರಿ ಮತ್ತು ಯಜಮಾನ ದಾಸಪ್ಪಾಚಾರಿ
3. ಮರಗೆಲಸದ ಮುತ್ತುಸ್ವಾಮಿ ಆಚಾರಿ
4. ಮರಗೆಲಸದ ಸುಬ್ರಾಯಾಚಾರಿ
5. ಚಿನ್ನಗೆಲಸದ ನಾಗಾಚಾರಿ
6. ಚಿನ್ನಗೆಲಸದ ದಾಸಂಣಾಚಾರಿ

7. ಚಿನ್ನಕೆಲಸದ ಲಿಂಗಣ್ಣಾಚಾರಿ
8. ಚಿನ್ನಕೆಲಸದ ವೇಲಾಯುಧಾಚಾರಿ
9. ಮರಕೆಲಸದ ವೈಯಾಪುರಿಯಾಚಾರಿ
10. ಚಿನ್ನಕೆಲಸದ ದೊಡ್ಡಸುಬ್ಬಣ್ಣಾಚಾರಿ
11. ಹುಣಸೂರು ಟವರ್ಗೆ ಕೇರಿದ ಕುಲ್ಲುಕುಣಿಕೆಯಲ್ಲಿರುವ ನರಸುಹ್ಮಾಚಾರಿ
12. ಡಿಟೋ ಲಕ್ಷ್ಮೀಪತಿಯಾಚಾರಿ
13. ಡಿಟೋ ಲಕ್ಕಣ್ಣಾಚಾರಿ
14. ಹುಣಸೂರಲ್ಲಿಯಿರುವ ಮರಗೆಲಸದ ಷಣ್ಮುಖಾಚಾರಿ ವಗೈರೆ

ಪ್ರತಿವಾದಿಗಳು—ಹುಣಸೂರಲ್ಲಿಯಿರುವವರು,

1. ರಾಮಸ್ವಾಮಿ ಆಚಾರಿ ಮಗ ಕುಳ್ಳಾಚಾರಿ
2. ಚಿನ್ನಕೆಲಸದ ಕೇಷವಾಚಾರಿ
3. ಚಿನ್ನಕೆಲಸದ ಡಿಟೋ ನರಸಾಚಾರಿ
4. ಬಿಳಿಕೆರೆನಂಜಪ್ಪಾಚಾರಿ
5. ನಾರಾಯಣಸ್ವಾಮಿ ಆಚಾರಿ
6. ಡಿಟೋ ಕಂಚುಗಾರ ಅಮಯಪ್ಪಾಚಾರಿ
7. ಡಿಟೋ ಮರಕೆಲಸದ ಕಾಳಪ್ಪಾಚಾರಿ ವಗೈರೆ

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಹುಣಸೂರು ಟವನಿನಲ್ಲಿ ಯಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಮೇಲ್ಕಂಡ ವೊಕದ್ದಮೆಯಲ್ಲಿನ ವಾದಿಯಾದವರು, ಈ ವೊಕದ್ದಮೆಯನ್ನು ತಮ್ಮ ಪರವಾಗಿಯೂ ಮತ್ತು ತಮ್ಮ ಜಾತಿ ಇತರ ಜನಗಳ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿದ್ದಾರೆಂದೂನ್ನೂ 1—2ನೇ ವಾದೀರು ಈ ಛತ್ರದ ಸುಘರ್ದನ್ನು ಹೊಂದಲು, ಮತ್ತು ಈ ಛತ್ರಕ್ಕೆ ಬೀಗಹಾಕುವದು ತೆಗಿಯುವದು ವಗೈರೆಯನ್ನು ಈ ಛತ್ರದ ಇತರ ಆಡಳಿತಗಳನ್ನ ನಡಿಸಲು, ಹಕ್ಕುದಾರರೆಂತ್ತ ಹಕ್ಕು ಸ್ಥಾಪಿಸಿ ಪ್ರತಿವಾದೀರಿಂದ ಛತ್ರವನ್ನು ವಾದೀರ ಸುಘರ್ದಿಗೆ ಕೊಡಿಸಬೇಕೆಂತಲೂ ಮತ್ತು ಪ್ರತಿವಾದೀರೆಲ್ಲರೂ ಸಹ 1—2ನೇ ವಾದೀರ ಅನುಭವದಲ್ಲಿ ಹತ್ತು ಜನರಂತೆ ವುಪಾಕರ್ಮ, ಶಿವರಾತ್ರೆ, ಭಜನೆ, ಜಾತಿ ಪಂಚಾಯಿತಿ ವಗೈರೇ ಎಲ್ಲಾ ಕೆಲಸಗಳಿಗೂ ಸಹ ಈ ಛತ್ರಕ್ಕೆ ಪ್ರವೇಶಿಸಿ ಈ ಛತ್ರವನ್ನು ವುಪಯೋಗಿಸಬಹುದೆಂತ್ತಲೂ ಮತ್ತು ಮೈಸೂರು ಟವರ್ಮ ಮೇಜಿಸ್ಟ್ರೇಟರವರು ಮಾಡಿದ 1894—95ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ 232ನೇ ನಂಬರು ಆರ್ಡರನ್ನು ರದ್ದುಪಡಿಸಿ ಹಾಲಿ ಪ್ರತಿವಾದೀರು, ವಾದೀರು ಛತ್ರಕ್ಕೆ ಪ್ರವೇಸಿ ಛತ್ರವನ್ನು ವುಪಯೋಗಿಸಲು ಇರುವ ಪ್ರತಿಬಂಧಕವನ್ನು ತಪ್ಪಿಸಬೇಕೆಂತಲೂ,

B. ಹಾಗೆ ವಾದೀರೊಬ್ಬರೇ ಸುಘರ್ದು ಹೊಂದಲು ಅಥವಾ 1—2ನೇ ವಾದೀರಲ್ಲಿ ಪ್ರವೇಶಿಸಬೇಕೆಂತ ಡಿಕ್ರಿಕೊಡಲು ಆಗುವದಿಲ್ಲವೆಂತ ಒಂದು ವೇಳೆ ಕೋರ್ಟಿನವರಿಗೆ ತೋರಿಬಂದಲ್ಲಿ ಪ್ರತಿವಾದೀರಂತೆ ವಾದೀರಿಗೂ ಈ ಛತ್ರದ ಜಂಟಿ ಸುಘರ್ದನ್ನು ಕೊಡಿಸಬೇಕೆಂತ್ತಲೂ,

C. ಈ ವೊಕದ್ದಮೆ ಕೋರ್ಟು ಖರ್ಚು ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇನ್ನೂ ಇತರ ಪರಿಹಾರಗಳಿಗೂ ಸಹ ದಾವಾ ದಾಖಲ್ಮಾಡಿರುತ್ತಾರೆಂದೂನ್ನೂ ಸದರೀ ವೊಕದ್ದಮೆ 1896ನೇ ಇಸವಿ ಅಕ್ಟೋಬರು 29ನೇ ತಾರೀಖಿಗೆ ಯಿಷ್ಯೂಬಗ್ಗೆ ಹಿಯರಿಂಗು ಯಿಟ್ಟು ಇರುವದರಿಂದ ಈ ವೊಕದ್ದಮೆಕ್ಕೆ ಕಕ್ಷಿಗಾರನಾಗಿ ಕೇರಬೇಕೆಂದು ಯಿರುವ ಸಮಸ್ತ ಜನಗಳೂ ಈ ಕೋರ್ಟು ರೂಬರೂ ಮೇಲ್ಕಂಡ ತಾರೀಖಿಗೆ ಹಾಜರಾಗತಕ್ಕದ್ದೆಂದು ಪ್ರಸಿದ್ಧಪಡಿಸಿದೆ.

31—8—96.

ವಿ. ರಂಗಾಚಾರ್,
ಮುನ್ಸೀಫ್.

ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟು ಇದರಡಿ ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಚೆಗಳಿಗೆ ಸ್ಯ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟೂ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.